**CC. No.580/2016**
**DW -1**

**ಪ್ರಮಾಣೀಕರಿಸಲಾದ ದಿನಾಂಕ: 28-11-2025.**

**<u>ಮುಂದುವರೆದ ಪಾಟೀ ಸವಾಲು : ಆರೋಪಿ ಪರ ಶ್ರೀ. ಎಂ ಸಿ ಎನ್ ವಕೀಲರಿಂದ :-</u>**

ನನಗೆ ಶೇಖರ್ ಸುಮಾರು 20 ವರ್ಷಗಳಿಂದ ಪರಿಚಯ . ಈ ಪ್ರಕರಣದಲ್ಲಿ ನಾನು ಜಂಟಿ ಮೆಮೋವನ್ನು ಸಲ್ಲಿಸಿರುತ್ತೇನೆ. ಅದರಂತೆ ನೆಡೆದುಕೊಂಡಿರುತ್ತೇನೆ. ಸದರಿ ಜಂಟಿ ಮೆಮೋ ಪ್ರಕಾರ ಪಿರ್ಯಾದಿಗೆ ನಿಗದಿತ ಸಮಯದಲ್ಲಿ ಹಣ ಕೊಟ್ಟರುವುದಿಲ್ಲ ಹಾಗೂ ಅದರಂತೆ ನೆಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೇಮೋವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ ನಾನು ಸುಮಾರು 10 ಕ್ಕಿಂತ ಹೆಚ್ಚು ಮುದ್ದತ್ತಿನ ದಿನಾಂಕಗಳಲ್ಲಿ ಗೈರುಹಾಜರಾಗಿದ್ದೆ.

ಸದರಿ ಭಾಗಶಃ ಹಣವನ್ನು ಪಡೆಯುವ ಕಾಲಕ್ಕೆ ಶೇಖರ್ ರವರು ಕೂಡಾ ಅಲ್ಲಿದ್ದು ಅವರ ಸಮಕ್ಷಮ ನಾನು ದಾಹಲಾತಿಗಳನ್ನು ಶೇಖರ್ ರವರಿಗೆ ಪಿರಾದಿಯಿಂದಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಜಂಟಿ ಮೆಮೋ ಪರಕಾರ ಆ ದಿನ ನಾನು ಬಾಕಿ ಹಣ ಕೊಡುವುದು ಇತ್ತು ಎಂದರೆ ಸರಿಯಲ್ಲ. ಜಂಟಿ ಮೆಮಾೀ ದಲ್ಲಿ ಖಾತೆ ನಂಬರನ್ನು ನಮೂದು ಮಾಡಿರಲಿಲ್ಲ. ಶೇಖರ್ ರವರು ನನೊ ನಂದಿಗೆ ಈಗೇಲೂ ಸಹ ವಿಶ್ವಾಸದಿಂದ ಇದ್ದಾರೆ ಮತ್ತು ಸದರಿ ದಾಖಲಾತಿ ಅವರ ಬಳಿ ಇದೆಎಂದು ನನಗೆ ಈಗಲೂ ಗೊತ್ತಿದೆ ಎಂದರೆ ಸರಿಯಲ್ಲ. ನಾನು ಮತ್ತು ಶೇಖರ್ ರವರು ಸೇರಿಕೊಂಡು ಪಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಖುದ್ದಾಗಿ ಪಿರ್ಯಾದಿಯಿಂದ ಹಣವನ್ನು ಪಡೆದು ಆತನಿಗೆ ಹಣವನ್ನು ಮರುಪಾವತಿ ಮಾಡುವ ಭಾದ್ಯತೆಯನ್ನು ಹೊಂದಿದ್ದು ಅದರ ಸಲುವಾಗಿ ಪಿರ್ಯಾದಿಗೆ ನನ್ನ ಖಾತೆಯ ಸಹಿ ಮಾಡಿದ ಚೆಕನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಜಾಮೀನಿಗಾಗಿ ನನ್ನ ಚೆಕನ್ನು ಕೊಟ್ಟಿರುವುದಿಲ್ಲ . ಆದರೆ ನಾನು ಪಡೆದ ಸಾಲದ ಭದ್ರತೆಗಾಗಿ ಕೊಟ್ಟಿರುತ್ತೇನೆ ಎಂದರೆ ಸ ರಿಯಲ್ಲ. ಪಿರ್ಯಾದಿ ಶೇಖರ್ ರವರಿಗೆ ಯಾವುದೇ ಸಾಲವನ್ನು ಕೊಟ್ಟಿರಲಿಲ್ಲ ಹಾಗೂ ಅವರಿಂದ ಶೇಖಡ 3 ರಷ್ಟು ಬಡ್ಡಿಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತಹ ಸಂಗತಿಗಳು ನನ್ನ ಪ್ರತ್ಯುತ್ತರ

**CC. No.580/2016**
**DW -1**

ನೋಟೀಸಿನಲ್ಲಿ ಅಥವಾ ಈ ಹಿಂದೆ ಎಲ್ಲಿಯೂ ಹೇಳಿರಲಿಲ್ಲ ಎಂದರೆ ಸರಿಯಲ್ಲ. ನಾನು ಸಲಿಲಸಿದ ಜಂಟಿ ಅರ್ಜಿಯಲ್ಲೂ ಕೂಡಾ ಈ ಸಂಗತಿಗಳನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.ನಾನು ಪಿರಾದಿಗೆ ಹಣ ಕೊಡುವ ಭಾದ್ಯತೆಯನ್ನು ಹೊಂದಿದ್ದು ಆತನಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದೆದೇನೆ ಎಂದರೆ ಸ ರಿಯಲ್ಲ.

**<u>ಮರು ವಿಚಾರಣೆ : ಇರುವುದಿಲ್ಲ.</u>**

**(ತೆರೆದ ನ್ಯಾ ಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾ ಯಾಧೀಶರು, ತಿಪಟೂರು**